# <u>ಹಿರಿಯ ಶ್ರೇಣಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ</u>

## <u>ಸಿಸಿಃ 621/2022</u>

| | | |
|---|---|---|
| ಫಿರ್ಯಾಧಿದಾರ | ಃ | ಕರ್ನಾಟಕ ರಾಜ್ಯ ಇವರ ಪರವಾಗಿ<br>ಹೊಳಲ್ಕೆರೆ ಪೊಲೀಸ್ ಠಾಣೆ |

**ವಿರುದ್ಧ**

| | | |
|---|---|---|
| ಆರೋಪಿತರು | ಃ | 1. ನಿಂಗಪ್ಪ ಈ ತಂದೆ ಈರಪ್ಪ, ವಯಸ್ಸು ಸುಮಾರು 38 ವರ್ಷ, ಉದ್ಯೋಗಃ ಕೆ.ಎ-48-ಟಿ-1365 ನೇ ನಂಬರಿನ ಟ್ರಾಕ್ಟರ್ ಮತ್ತು ಛಾಸಿಸ್ ನಂಃBT/5TT/6819 ನೇ ನಂಬರಿನ ಟ್ರೈಲರ್ ನ ಚಾಲಕ, ವಾಸಃಕಾಮಸಮುದ್ರ (ಅವಳಿಹಟ್ಟಿ) ಗ್ರಾಮ, ಹೊಳಲ್ಕೆರೆ ತಾಲ್ಲೂಕ್, ಚಿತ್ರದುರ್ಗ ಜಿಲ್ಲೆ.<br><br>2. ಚೌಡಪ್ಪ ತಂದೆ ಲೇಟ್ ಗಂಗಪ್ಪ, ವಯಸ್ಸು ಸುಮಾರು 62 ವರ್ಷ, ಉದ್ಯೋಗಃ ಜಿರಾಯ್ತಿ ಹಾಗೂ ಕೆ.ಎ-48-ಟಿ-1365 ನೇ ನಂಬರಿನ ಆರ್.ಸಿ. ಮಾಲೀಕರು, ವಾಸಃ ಬೊಮ್ಮಕ್ಕನಹಳ್ಳಿ ಗ್ರಾಮ, ಜಗಳೂರು ತಾಲ್ಲೂಕ್, ದಾವಣಗೆರೆ ಜಿಲ್ಲೆ. |

## <u>ಆರೋಪಿತನ ಹೇಳಿಕೆ(Plea)</u>

ದಿನಾಂಕಃ04.03.2021 ರಂದು ರಾತ್ರಿ ಸುಮಾರು 7-00 ಗಂಟೆ ಸಮಯದಲ್ಲಿ 1 ನೇ ಆರೋಪಿಯಾದ ನೀವು ಕೆ.ಎ-48-ಟಿ-1365 ನೇ ನಂಬರಿನ ಟ್ರಾಕ್ಟರ್ ಮತ್ತು ಛಾಸಿಸ್ ನಂಃBT/5TT/6819 ನೇ ನಂಬರಿನ ಟ್ರೈಲರ್ ನ್ನು ಹೊಳಲ್ಕೆರೆ-ಅವಳಿಹಟ್ಟಿ ಮಧ್ಯೆ ಶ್ರೀನಿವಾಸ ಅಯ್ಯಂಗಾರ್ ಇವರ ತೋಟದ ಸಮೀಪ ರಸ್ತೆಯಲ್ಲಿ ಹೊಳಲ್ಕೆರೆ ಕಡೆಯಿಂದ ಅವಳಿಹಟ್ಟಿ ಗ್ರಾಮದ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿರುತ್ತೀರಿ ಎಂದು ಆ ಮೂಲಕ 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂಃ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

2) ಮೇಲಿನ ಅಂಶ-1 ರಲ್ಲಿ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಮೇಲ್ಕಂಡ ವಾಹನವನ್ನು ಮೇಲ್ಕಂಡ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಅವಳಿಹಟ್ಟಿ ಕಡೆಯಿಂದ ಹೊಳಲ್ಕೆರೆ ಕಡೆಗೆ ಬರುತ್ತಿದ್ದ ಕೆಎ-16-ಈ.ಕ್ಯೂ-5487 ನೇ ನಂಬರಿನ ಮೋಟಾರ್ ಸೈಕಲ್ ಗೆ ಡಿಕ್ಕಿಪಡಿಸಿದ ಪರಿಣಾಮ ಬೈಕಿನಲ್ಲಿದ್ದ ಮೂರು ಜನರು ಕೆಳಗೆ ಬಿದ್ದು ತೀವ್ರ ಗಾಯಗಳಾಗಿ ಬೈಕಿನ ಚಾಲಕ ಚಿತ್ತಪ್ಪ ತಂದೆ ನಾಗರಾಜಪ್ಪ ಇವರಿಗೆ ತಲೆಗೆ ಹೊಡೆತ ಬಿದ್ದು ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ತೀವ್ರವಾಗಿ ಗಾಯಗೊಂಡಿದ್ದ ಬೈಕಿನ ಹಿಂಬದಿ ಕುಳಿತಿದ್ದ ಮಧು ಯಾನೆ ಉಪ್ಪಿ ತಂದೆ ಈರಪ್ಪ ಹಾಗೂ ಅಭಿ ತಂದೆ ಚಿತ್ತಪ್ಪ ಇವರನ್ನು ಯಾವುದೋ ಒಂದು ವಾಹನದಲ್ಲಿ ಚಿಕಿತ್ಸೆಗಾಗಿ ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಗೆ

ಕರೆದುಕೊಂಡು ಬಂದು ಚಿಕಿತ್ಸೆಗೆ ದಾಖಲಿಸಿದ್ದು ಅದರಲ್ಲಿ ಮಧು ಯಾನೆ ಉಪ್ಪಿ ಇವರು ರಾತ್ರಿ 7-50 ಗಂಟೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ. ಅಭಿ ತಂದೆ ಚಿತ್ತಪ್ಪ ಇವರನ್ನು ಹೆಚ್ಚಿನ ಚಿಕಿತ್ಸೆಯ ಬಗ್ಗೆ ವೈದ್ಯರ ಸಲಹೆಯಂತೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು ಅಭಿ ತಂದೆ ಚಿತ್ತಪ್ಪ ಇವನು ಸಹ ದಿನಾಂಕಃ04.03.2021 ರಂದು ರಾತ್ರಿ 9-10 ಗಂಟೆಗೆ ಮೆಗ್ಗಾನ್ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ ಎಂದು ಆ ಮೂಲಕ 1 ಮತ್ತು 2 ನೇ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

3) ಮೇಲಿನ ಅಂಶ-1 ರಲ್ಲಿ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಮೇಲ್ಕಂಡ ವಾಹನವನ್ನು ಮೇಲ್ಕಂಡ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಅಪಘಾತ ಪಡಿಸಿ, ಅಪಘಾತದಲ್ಲಿ ಗಾಯಗೊಂಡವನ್ನು ಉಪಚರಿಸದೇ ಟ್ರಾಕ್ಟರ್ ಮತ್ತು ಟ್ರೈಲರ್ ನ್ನು ಸ್ಥಳದಲ್ಲಿಯೆ ಬಿಟ್ಟು ಓಡಿ ಹೋಗಿರುತ್ತೀರಿ ಎಂದು ಆ ಮೂಲಕ 1 ನೇ ಆರೋಪಿಯಾದ ನೀವು ಕಲಂಃ 187 ಐ.ಎಂ.ವಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

4) ಮೇಲಿನ ಅಂಶ-1 ರಲ್ಲಿ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿಯಾದ ನೀವು, ಟ್ರಾಕ್ಟರ್ ಮತ್ತು ಟ್ರೈಲರ್ ನ ಚಾಲನ ಪರವಾನಗಿಯನ್ನು ಹೊಂದಿರುವುದಿಲ್ಲ ಎಂದು ಆ ಮೂಲಕ 1 ನೇ ಆರೋಪಿಯಾದ ನೀವು ಕಲಂಃ3 ಸಹವಾಚಕ ಕಲಂಃ181 ಐ.ಎಂ.ವಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

5) ಮೇಲಿನ ಅಂಶ-1 ರಲ್ಲಿ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯಾದ ನೀವು, ನಿಮ್ಮ ಟ್ರಾಕ್ಟರ್ ಮತ್ತು ಟ್ರೈಲರ್ ನ ವಿಮಾ ಪಾಲಿಸಿಯನ್ನು ನವೀಕರಿಸದೆ ವಾಹನವನ್ನು ಚಾಲನೆ ಮಾಡಲು ನೀಡಿರುತ್ತೀರಿ ಎಂದು ಆ ಮೂಲಕ 1 ಮತ್ತು 2 ನೇ ಆರೋಪಿಯಾದ ನೀವು ಕಲಂಃ146 ಸಹವಾಚಕ ಕಲಂಃ196 ಐ.ಎಂ.ವಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

6) ಮೇಲಿನ ಅಂಶ-1 ರಲ್ಲಿ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯಾದ ನೀವು, ಚಾಲನಾ ಪತ್ರ ಇಲ್ಲದ 1 ನೇ ಆರೋಪಿಗೆ ನಿಮ್ಮ ಟ್ರಾಕ್ಟರ್ ಮತ್ತು ಟ್ರೈಲರ್ ನ ವಾಹನವನ್ನು ಚಾಲನೆ ಮಾಡಲು ನೀಡಿರುತ್ತೀರಿ ಎಂದು ಆ ಮೂಲಕ 1 ಮತ್ತು 2 ನೇ ಆರೋಪಿಯಾದ ನೀವು ಕಲಂಃ5 ಸಹವಾಚಕ ಕಲಂಃ180 ಐ.ಎಂ.ವಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

| | |
|---|---|
| ಪ್ರಶ್ನೆ :1 | ಮೇಲೆ ಹೇಳಿದ ಆಪಾದನೆ ನಿಮಗೆ ತಿಳಿಯಿತೆ? |
| ಉತ್ತರಃ | |
| ಪ್ರಶ್ನೆ :2 | ಮೇಲೆ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ಪ್ರಕರಣವನ್ನು ನಡೆಸುತ್ತೀರೋ? |
| ಉತ್ತರಃ | |
| | ಮೇಲಿನ ಆಪಾದನೆಯನ್ನು 1 ಮತ್ತು 2 ನೇ ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. |

(ಶ್ರೀ ಸರವಣನ್ ಎಸ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ.

ದಿನಾಂಕಃ . . 2023.